

# ಮರದಿಂದ ಪಾಠ ಕಲಿತ ಮಕ್ಕಳು

■ ದೀಪಶ್ರೀ ಎಸ್. ಕೂಡ್ಲಿಗಿ
ಕಲೆ: ಸಂತೋಷ್ ಸಸಿಹಿತ್ಲು

ಅಂದು ಭಾನುವಾರ ಪುಟ್ಟನ ಶಾಲೆ ರಜೆ ಇತ್ತು. ಪುಟ್ಟ, ಗೋಪಿ, ಸಾನ್ವಿ, ರಾಜು, ಸೀಮಾ ಎಲ್ಲರೂ ಭಾನುವಾರ ಒಂದು ದಿನ ಪಿಕ್ನಿಕ್ ಹೊರಡುವ ಪ್ಲಾನ್ ಮಾಡಿದರು. ಸ್ನೇಹಿತರೆಲ್ಲರೂ ಸೇರಿ ಪಿಕ್ನಿಕಿಗೆ ತಿಂಡಿಯನ್ನು ತೆಗೆದುಕೊಂಡು ಹೋಗಲು ಮನೆಯಲ್ಲಿ ಏನೇನು ತಿಂಡಿ ಮಾಡಿಸಿಕೊಂಡು ತರಬೇಕೆಂದು ಮುಂಚೆಯೇ ಮಾತನಾಡಿಕೊಂಡರು.

ಪುಟ್ಟ ಅಮ್ಮನ ಕೈಯಿಂದ ಚಕ್ಕುಲಿ ಮಾಡಿಸಿದ, ಗೋಪಿ ಬ್ರೆಡ್ ತರುತ್ತೇನೆ ಎಂದು ಒಪ್ಪಿಕೊಂಡ. ಸಾನ್ವಿ, ರಾಜು ಇವರಿಬ್ಬರು ಬಿಸ್ಕೆಟ್ ಹಾಗೂ ಸೀಮಾ ಇತರ ಸ್ನ್ಯಾಕ್ಸ್ ತರುತ್ತೇವೆ ಎಂದು ಹೇಳಿದರು. ಸ್ನೇಹಿತರು ಪಿಕ್ನಿಕಿಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡರು. ಕಾಲು ನಡಿಗೆಯಲ್ಲಿ ಹೊರಸಂಚಾರ ಹೊರಟರು ಸ್ನೇಹಿತರು.

ಒಂದು ಮರದ ಕೆಳಗೆ ಎಲ್ಲರೂ ಕುಳಿತುಕೊಂಡರು. ಅಲ್ಲಿಯೇ ಕುಂಟೆಬಿಲ್ಲೆ, ಕಣ್ಣಾಮುಚ್ಚಾಲೆ, ಮರಕೋತಿ ಆಟ, ಲಗೋರಿ ಆಟಗಳನ್ನು ಆಡುವಷ್ಟರಲ್ಲಿ ಮಧ್ಯಾಹ್ನವಾಗಿತ್ತು. ಮಧ್ಯಾಹ್ನ ಬಿಸಿಲು ಹೆಚ್ಚಾಗಿತ್ತು. ಮರದ ಪಕ್ಕದಲ್ಲಿದ್ದ ಕೊಳದಲ್ಲಿ ಎಲ್ಲರೂ ಸ್ನಾನ ಮಾಡಿದರು. ದಣಿವಾರಿಸಿಕೊಂಡರು. ಪುಟ್ಟ ಹಾಗೂ ಅವನ ಸ್ನೇಹಿತರೆಲ್ಲರಿಗೂ ಮನೆಯಲ್ಲಿದ್ದ ಸ್ವಿಮ್ಮಿಂಗ್ ಪೂಲಿನಲ್ಲಿ ಸ್ನಾನ ಮಾಡಿ ಬೇಸರವೆನಿಸಿ ಕೊಳದಲ್ಲಿ ಸ್ನಾನ ಮಾಡಿದ್ದು ಖುಷಿ ಅನುಭವ ನೀಡಿತು.

ಎಲ್ಲರಿಗೂ ಹಸಿವಾಗಿತ್ತು. ತಾವು ತಂದಿದ್ದ ಚಕ್ಕುಲಿ, ಬ್ರೆಡ್, ಬಿಸ್ಕತ್ತು, ಸ್ನ್ಯಾಕ್ಸ್ ಎಲ್ಲರೂ ಸೇವಿಸಿ ಮತ್ತೆ ಆಟವಾಡಲು ನಿರ್ಧರಿಸಿದರು. ಸ್ನೇಹಿತರೆಲ್ಲರೂ ತಂದಿದ್ದ ತಿಂಡಿಯನ್ನು ಎಲ್ಲರೂ ಹಂಚಿಕೊಂಡು ತಿಂದರು. ಮತ್ತೆ ಮರಕೋತಿ ಆಟ ಆಡಲು ಒಂದು ಮರ ಹತ್ತಿ ಕುಳಿತರು.

ಪುಟ್ಟ ಹತ್ತಿ ಕುಳಿತು, ಮರದಲ್ಲಿನ ಎಲೆಗಳನ್ನು ಕಿತ್ತು, ಕಿತ್ತು ಹಾಕುತ್ತಿದ್ದ. ಆಗ ಅವನಿಗೆ ಅಲ್ಲಿದ್ದ ಪ್ಲಸ್ ಆಕೃತಿ ಕಣ್ಣಿಗೆ ಬಿತ್ತು. ಪುಟ್ಟ ಇದೇನಿರಬಹುದು ಎಂದು ಯೋಚಿಸುತ್ತಾ, ಅವನ ಉಳಿದ ಸ್ನೇಹಿತರನ್ನೆಲ್ಲಾ ಮರದ ಹತ್ತಿರ ಕರೆದ. ಎಲ್ಲರೂ ಕುತೂಹಲದಿಂದ ಮರವನ್ನು ಹಾಗೂ ಅದರ ಮೇಲಿನ ಪ್ಲಸ್ ಚಿಹ್ನೆಯನ್ನು ನೋಡುತ್ತಾ ನಿಂತರು.

ಆಗ ಇದ್ದಕ್ಕಿದ್ದಂತೆ ಮರವು ಮಾತನಾಡಲಾರಂಭಿಸಿತು. ‘ನಾನು ಮಾಂತ್ರಿಕ ಮರ. ನಿಮಗೆ ತಿಳಿದಿರುವ ಮ್ಯಾಜಿಕ್ ಪದಗಳನ್ನು ಹೇಳುತ್ತಾ ಹೋಗಿ ನಾನು ನಿಮಗೆ ಬೇಕಾದುದ್ದನ್ನೆಲ್ಲ ಕೊಡುತ್ತೇನೆ’ ಎಂದು ಹೇಳಿತು. ‘ನೀವು ಚಾಕೊಲೇಟ್, ಪೆಪ್ಪರ್ಮೆಂಟ್, ಆಟಿಕೆ ಹೀಗೆ ಏನನ್ನು ಬೇಕಾದರೂ ಕೇಳಿ ಪಡೆಯಬಹುದು’ ಎಂದಿತು. ಮಕ್ಕಳೆಲ್ಲರೂ ಸ್ವಲ್ಪ ಭಯಪಟ್ಟರು. ಆದರೂ ಕೇಳಿದ್ದನ್ನೆಲ್ಲಾ ಮರ ಕೊಡುತ್ತದೆ ಎಂದರೆ ಕೇಳೋಣ ಎಂದು ಯೋಚಿಸಿದರು.

ಪುಟ್ಟ ‘ಅಬ್ರ ಕಾ ಡಾಬ್ರ’ ಎಂಬ ಮ್ಯಾಜಿಕ್ ಪದ